**ಕಥೆ**





**ವಿಜಯಾ ಮೋಹನ್**

ಕಲೆ: ರಾಮಕೃಷ್ಣ ಸಿದ್ರಪಾಲ

ಅಪ್ಪ ಅವನ ಮುಖದಲ್ಲಿದ್ದ ಬಿಳಿ ಮೀಸೆಯ ಕೆಳಗಿನ ಒಣಗಿದ ತುಟಿಗಳ ನಡುವೆ ಸಿಗರೇಟುಗಳನ್ನ ಹೊತ್ತು ಗೊತ್ತಿಲ್ಲದಂಗೆ ಸುಟ್ಟು ಸುಟ್ಟು ಹೊಗೆಯ ಸುರುಳಿಯೊಳಗಿನಲ್ಲಿ, ಮೂತಿಯ ಮೇಲಿರುವ ತುಟಿಗಳು ಅರೆಬೆಂದ ಬದನೆಯ ಹೋಳಾಗಿರುವ ಜೊತೆಗೆ ಈಸು ವರ್ಷದ ಅವನ ಧಿಮಾಕುಗಳು ಸುಟ್ಟು ಕರಕಲಾದವೇನೊ ಅಂದುಕೊಂಡರೆ, ನಾವಂದುಕೊಂಡ ನಿರೀಕ್ಷೆ ಸುಳ್ಳಾಗಿ ಈಗೀಗ ಸುಕ್ಕುಗಟ್ಟುತ್ತಿರುವ ಮುಖದ ಮೇಲೆ ನಾನೇ ಎಲ್ಲದರಲ್ಲೂ ಮುಂದಿರಬೇಕೆನ್ನುವ ಸವಾಲಿನ ಕಕ್ಕುಲಾತಿಗಳು ಅಪ್ಪನೆದೆಯಲ್ಲಿ ಸಾಲಿಡುದು ನಿಂತುಬಿಟ್ಟವು. ಅವನು ಕುಂತಾಗ ನಿಂತಾಗ ನಾನು ನಾನೆಂಬ ತಪಸ್ಸಿಗೆ ಬಿದ್ದು ಅವನೊಳಗವನು ಇಲ್ಲದಂಗಾಗಿ, ಈ ನಡುವೆ ಬೆಂಗಳೂರಿನಲ್ಲಿ ಹೆಚ್ಚು ಕಾಲವರೆಣೆ ಮಾಡಾಕಾಗದೆ ಒದ್ದಾಡುತ್ತಿರುವ ಅಪ್ಪ, ತಕಾ ಅಂದ್ರೆ ಊರಿಗೋಗ್'ತ್ತಿರುತ್ತಾನೆ. ಅಲ್ಲಿಗೋದವನು ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಂತುಕಳಲ್ಲ. ಅಲ್ಲಿ ಅವನ ಹಿಂದುಮುಂದಲವರ ಬಂಧು ಬಳಗದವರ ನಡುವೆ ಈಸೂ ದಿನ ಬಾಳಿದ ಬೆಂಗಳೂರಿನ ಬಣ್ಣದ ಬದುಕನ್ನ ಬೆನ್ನು ತಟ್ಟಿ ತಟ್ಟಿ ಚಪ್ಪರಿಸಿಕೊಳ್ಳುತ್ತಾನೆ. ಓಹೋ ಈತನೊಬ್ಬನೇ ಬೆಂಗಳೂರನ್ನ ಕೊಂಡುಬಿಟ್ಟವನಂಬಂಗೆ ಉಮೇದಿನೊಳಗೆ ವದರಿದ್ದೇ ವದರಿದ್ದು. ಅಮ್ಮನಿಗೆ ಕೇಳಿ ಕೇಳಿ ಕಿವಿ ತೂತು ಬಿತ್ತೆಂದು, ನಮ್ಮತ್ರಿರ ಒಪ್ಪಿಸಿ ಒಪ್ಪಿಸಿ ಅವಳೆದೆಯ ಉಸಿರನ್ನೆಲ್ಲ ಎಳೆದು ಎಳೆದು ಎಕ್ಕಾಸಪಡುತ್ತಿದ್ದಾಳೆ. ಅಪ್ಪ ಮಾತ್ರ ರಾತ್ರಿಯಾಯಿತೆಂದರೆ ನೆಟ್ಟಗೆ ನಿದ್ದೆ ಬಾರದೆ ಸರುವೊತ್ತಿಗೆ ಎದ್ದು ಕುಂತು ಅಮ್ಮನನ್ನು ಎದ್ದೇಳಿಸಿ ಮಾತಿಗೆಳೆಯುವ ಖಯಾಲಿಯನ್ನು ಇದುವರೆಗೂ ಬಿಟ್ಟೇ ಇಲ್ಲ. ಮೊನ್ನೆ ದಿನ ರಾತ್ರಿ ಅಂದ್ರೆ, ಬೆಳಗಿನ ಜಾವದ ಮೂರುಗಂಟೆಯ ವೇಳೆಗೆ ಮೈಮುರಿದು ಎದ್ದವನು, ತಿರುಗಿ ನಾಳಿಕೆ ಊರಿಗೋಗ್ಬೇಕ್ ಕಣೆ ಎಂದು ಬಾಯಿಯನ್ನು ನೆಟ್ಟಗೆ ಹಿಗ್ಗಲಿಸದೆ ಅರ್ಧಂಬರ್ಧ ಆಕಳಿಸಿಕೊಂಡು ಸಲೀಸಾಗಿ ಬಾಯಿಂದ ಬಾರದ ಮಾತಿನೊಳಗೆ